# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ:ಎಸಿಎ-3/ಎ.3/ಎಂ.ಬಿ.ಎ/ಎಂ.ಸಿ.ಎ/ಸಂ.ನ/2022-2023

ಜ್ಞಾನಭಾರತಿ
ಬೆಂಗಳೂರು-56

**ದಿನಾಂಕ: 06-01-2023**

## ಅಧಿಸೂಚನೆ

**ವಿಷಯ: 2022-23ನೇ ಶೈಕ್ಷಣಿಕ ಸಾಲಿಗೆ ಎಂ.ಬಿ.ಎ ಮತ್ತು ಎಂ.ಸಿ.ಎ ಕೋರ್ಸುಗಳಿಗೆ ಸಂಯೋಜನೆ ನವೀಕರಿಸುವ ಬಗೆಗೆ.**

**ಉಲ್ಲೇಖ: 1. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಸೀಟ್ ಮ್ಯಾಟ್ರಿಕ್ಸ್ (ಇಡಿ 173 ಟಿಇಸಿ 2022 ದಿನಾಂಕ:23.12.2022)**
**2. ಕುಲಪತಿಯವರ ಅನುಮೋದನೆ ದಿನಾಂಕ: 05-01-2023.**

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ **2000**ದ **59**ನೇ ಪ್ರಕರಣದ **17** ಮತ್ತು **18**ನೇ ಉಪಬಂಧದಲ್ಲಿ ಪ್ರದತ್ತವಾದ ಅಧಿಕಾರದನ್ವಯ ಬೆಂಗಳೂರು ವಿಶ್ವವಿದ್ಯಾಲಯವು ಈ ಕೆಳಗೆ ನಮೂದಿಸಿರುವ ಕಾಲೇಜುಗಳಿಗೆ ಅವುಗಳಲ್ಲಿ ಅಸ್ತಿತ್ವದಲ್ಲಿರುವ ಎಂ.ಬಿ.ಎ ಮತ್ತು ಎಂ.ಸಿ.ಎ ಕೋರ್ಸುಗಳಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು **2022-23**ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆಯನ್ನು ನವೀಕರಿಸಿ ಮುಂದುವರಿಸಿದೆ.

| ಕ್ರ.ಸಂ. | ಕಾಲೇಜಿನ ಹೆಸರು ಮತ್ತು ವಿಳಾಸ | ಕೋರ್ಸು | ವಿದ್ಯಾರ್ಥಿ ಪ್ರಮಾಣ |
|---|---|---|---|
| 1. | ಆಚಾರ್ಯ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಸೈನ್ಸ್, 1ನೆ ಅಡ್ಡರಸ್ತೆ, 1ನೇ ಹಂತ, ಪೀಣ್ಯ, ಕೈಗಾರಿಕಾ ನಗರ, ಬೆಂಗಳೂರು -58 | ಎಂ.ಬಿ.ಎ<br>ಎಂ.ಸಿ.ಎ | 240 (ಇನ್ನೂರ ನಲವತ್ತು)<br>60 (ಅರವತ್ತು) |
| 2. | ಆಚಾರ್ಯಾಸ್ ಬೆಂಗಳೂರು ಬಿ ಸ್ಕೂಲ್, ಲಿಂಗದೀರನಹಳ್ಳಿ, ಮಾಗಡಿ ಮುಖ್ಯರಸ್ತೆ, ಬೆಂಗಳೂರು-091 | ಎಂ.ಬಿ.ಎ. | 240 (ಇನ್ನೂರ ನಲವತ್ತು) |
| 3. | ಎ.ಎಂ.ಸಿ ಕಾಲೇಜು, 18ನೇ ಕಿ.ಮೀ. ಬನ್ನೇರುಘಟ್ಟ ರಸ್ತೆ, ಬೆಂಗಳೂರು-83 | ಎಂ.ಬಿ.ಎ.<br>ಎಂ.ಸಿ.ಎ. | *180 (ನೂರ ಎಂಭತ್ತು)*<br>60 (ಅರವತ್ತು) |
| 4. | ಎ.ಐ.ಎಂ.ಎಸ್. ಐ.ಬಿ.ಎಸ್. ಬಿಸಿನೆಸ್ ಸ್ಕೂಲ್ (ಆಕ್ಲೀವ್ ಇನ್ಸಿಟಿಟ್ಯೂಟ್ ಆಫ್ ಮ್ಯಾನೆಜ್ಮೆಂಟ್ ಸ್ಟಡೀಸ್ ಇಂಟರ್‌ನ್ಯಾಷನಲ್ ಬಿಸಿನೆಸ್ ಸ್ಕೂಲ್), ನಂ. 235-ಇ1, ಬೊಮ್ಮಸಂದ್ರ ಇಂಡ್ರಸ್ಟ್ರಿಯಲ್ ಏರಿಯಾ, 3ನೇ ಫೇಸ್, ಹೊಸೂರು ರಸ್ತೆ, ಬೆಂಗಳೂರು - 560 099 | ಎಂ.ಬಿ.ಎ. | 180 (ನೂರ ಎಂಭತ್ತು) |
| 5. | ಬೆಂಗಳೂರು ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ನಂ.8/35, ಆರ್.ವಿ. ಇಂಜಿನಿಯರಿಂಗ್ ಕಾಲೇಜು ಎದುರು, ಮೈಸೂರು ರಸ್ತೆ, ಬೆಂಗಳೂರು-65. | ಎಂ.ಬಿ.ಎ. | 180 (ನೂರ ಎಂಭತ್ತು) |
| 6. | ಕ್ರೈಸ್ಟ್ ಅಕಾಡೆಮಿ ಇನ್ಸಿಟಿಟ್ಯೂಟ್ ಫಾರ್ ಅಡ್ವಾನ್ಸ್ಡ್ ಸ್ಟಡೀಸ್, ಕ್ರೈಸ್ಟ್ ನಗರ, ಹುಲ್ಲಹಳ್ಳಿ, ಬೇಗೂರು-ಕೊಪ್ಪ ರಸ್ತೆ, ಸಕ್ಲವಾರ ಅಂಚೆ, ಬೆಂಗಳೂರು-560 083 | ಎಂ.ಬಿ.ಎ. | 60 (ಅರವತ್ತು) |

| ಕ್ರ.ಸಂ. | ಕಾಲೇಜಿನ ಹೆಸರು ಮತ್ತು ವಿಳಾಸ | ಕೋರ್ಸ್ | ವಿದ್ಯಾರ್ಥಿ ಪ್ರಮಾಣ |
|---|---|---|---|
| 7. | ಸಿಟಿ ಕಾಲೇಜು,<br>27/2, 33ನೇ ಕ್ರಾಸ್, 2ನೇ ಮೈನ್, 7ನೇ ಬ್ಲಾಕ್,<br>ಜಯನಗರ, ಬೆಂಗಳೂರು-82 | ಎಂ.ಬಿ.ಎ. | 216 (ಇನ್ನೂರ ಹದಿನಾರು) |
| 8. | ದಯಾನಂದ ಸಾಗರ್ ಕಲೆ ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಶ್ಯಾವಿಗೆ ಮಲ್ಲೇಶ್ವರ ಹಿಲ್ಸ್, ಕುಮಾರಸ್ವಾಮಿ ಬಡಾವಣೆ, ಬೆಂಗಳೂರು-78. | ಎಂ.ಬಿ.ಎ.<br>ಎಂ.ಸಿ.ಎ. | 180 (ನೂರ ಎಂಭತ್ತು)<br>60 (ಅರವತ್ತು) |
| 9. | ಡಾನ್ ಬಾಸ್ಕೊ ಇನ್ಸಿಟಿಟ್ಯೂಟ್ ಆಫ್ ಬಯೋಸೈನ್ಸ್ ಅಂಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಕುಂಬಳಗೂಡು, ಮೈಸೂರು ರಸ್ತೆ, ಬೆಂಗಳೂರು -560 074. | ಎಂ.ಬಿ.ಎ. | 120 (ನೂರ ಇಪ್ಪತ್ತು) |
| 10. | ಈಸ್ಟ್ ವೆಸ್ಟ್ ಕಾಲೇಜ್ ಆಫ್ ಮ್ಯಾನೇಜ್ಮೆಂಟ್,<br>ನಂ.63, ವಿಶ್ವನೀಡಂ ಅಂಚೆ, ಮಾಗಡಿ ರಸ್ತೆ,<br>ಬೆಂಗಳೂರು-91. | ಎಂ.ಬಿ.ಎ.<br>ಎಂ.ಸಿ.ಎ. | 150 (ನೂರ ಐವತ್ತು)<br>120 (ನೂರ ಇಪ್ಪತ್ತು) |
| 11. | ಜಿ.ಟಿ. ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಅಂಡ್ ರಿಸರ್ಚ್, ನಂ.10/15, ಮಾಗಡಿ ರಸ್ತೆ, ಸುಂಕದಕಟ್ಟೆ, ವಿಶ್ವನೀಡಂ ಅಂಚೆ, ಬೆಂಗಳೂರು-091 | ಎಂ.ಬಿ.ಎ. | 120 (ನೂರ ಇಪ್ಪತ್ತು) |
| 12. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು,<br>ನಂ.5, 3ನೇ ಮುಖ್ಯರಸ್ತೆ, 7ನೇ ಕ್ರಾಸ್, ಆರ್.ಪಿ.ಸಿ. ಬಡಾವಣೆ, ವಿಜಯನಗರ, ಬೆಂಗಳೂರು-560040 | ಎಂ.ಬಿ.ಎ. | 60 (ಅರವತ್ತು) |
| 13. | ಹಿಲ್ ಸೈಡ್ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್,<br>ನಂ.9, ರಘುವನಹಳ್ಳಿ, ಕನಕಪುರ ಮೈನ್ ರಸ್ತೆ,<br>ಬೆಂಗಳೂರು -560 062. | ಎಂ.ಬಿ.ಎ. | 60 (ಅರವತ್ತು) |
| 14. | ಇಂಪೀರಿಯಲ್ ಇನ್ಸಿಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಮ್ಯಾನೇಜ್ಮೆಂಟ್, ನಂ.501, ಎಸ್.ವೈ. ನಂ.224-2, 226-2, ಸಾಲಹುಣಸೆ, ಉದಯಪುರ ಅಂಚೆ, ಕನಕಪುರ ಮುಖ್ಯರಸ್ತೆ, ಕಗ್ಗಲೀಪುರದ ಹತ್ತಿರ, ಬೆಂಗಳೂರು-082 | ಎಂ.ಬಿ.ಎ. | 120 (ನೂರ ಇಪ್ಪತ್ತು) |
| 15. | ಇಂಟರ್‌ನ್ಯಾಷನಲ್ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಎಂಟರ್‌ಪ್ರೂನರ್‌ಷಿಪ್, ನಂ.152/2, ನಿಸರ್ಗ ಕ್ಯಾಂಪಸ್, ಆರ್ಟ್ ಆಫ್ ಲಿವಿಂಗ್ ಹಿಂಬಾಗ, ಕನಕಪುರ ರಸ್ತೆ, ಉದಯಪುರ ಅಂಚೆ, ಬೆಂಗಳೂರು-560 082 | ಎಂ.ಬಿ.ಎ. | 60 (ಅರವತ್ತು) |
| 16. | ಐ.ಎಸ್.ಬಿ.ಆರ್. ಕಾಲೇಜು,<br>*ನಂ.16, ಫೇಸ್-1, ಎಲೆಕ್ಟ್ರಾನಿಕ್ ಸಿಟಿ,*<br>*ಬೆಂಗಳೂರು-560 100,* | ಎಂ.ಬಿ.ಎ. | 120 (ನೂರ ಇಪ್ಪತ್ತು) |
| 17. | ಎಸ್.ಎಸ್.ಬಿ. ಅಕಾಡೆಮಿ, ಎಸ್.ವೈ. ನಂ.85, ಸಿಂಗೇನ ಅಗ್ರಹಾರ, ಹುಸ್ಕೂರು ಅಂಚೆ, ಆನೇಕಲ್ ತಾಲ್ಲೂಕು, ಬೆಂಗಳೂರು-560 099 | ಎಂ.ಬಿ.ಎ. | 300 (ಮುನ್ನೂರು) |
| 18. | ಆಕ್ಸ್‌ಬ್ರಿಡ್ಜ್ ಬಿಸಿನೆಸ್ ಸ್ಕೂಲ್,<br>ನಂ.8 ಮತ್ತು 9, ಮಹದೇಶ್ವರನಗರ, ವಿಶ್ವನೀಡಂ ಅಂಚೆ, ಹೇರೋಹಳ್ಳಿ ಕ್ರಾಸ್, ಬೆಂಗಳೂರು -560 091 | ಎಂ.ಬಿ.ಎ | 90 (ತೊಂಭತ್ತು) |

ಸಂಖ್ಯೆ:ಎಸಿಎ-3/ಎ.3/ಎಂ.ಬಿ.ಎ/ಎಂ.ಸಿ.ಎ/ಸಂ.ಸ/2022-2023

Bangalore University ... copy



01/5/2024

**ಬೆಂಗಳೂರು ವಿಶ್ವವಿದ್ಯಾಲಯ**

ಸಂಖ್ಯೆ: ಎಸಿಎ-3/ಎ3/ಸಂ.ನ/2022-23

ಜ್ಞಾನಭಾರತಿ
ಬೆಂಗಳೂರು-560 056
**ದಿನಾಂಕ: ೦1-೪-2022**

## ಅಧಿಸೂಚನೆ

**ವಿಷಯ : 2022-23ನೇ** ಶೈಕ್ಷಣಿಕ ಸಾಲಿಗೆ ಸಂಯೋಜನೆ ನವೀಕರಿಸುವ ಬಗೆಗೆ.
**ಉಲ್ಲೇಖ:** ಕುಲಪತಿಯವರ ಅನುಮೋದನೆ ದಿನಾಂಕ: 01 - 8 -2022

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ **2000**ದ **59**ನೇ ಪ್ರಕರಣದ **17**ನೇ ಉಪಬಂಧದಲ್ಲಿ ಪ್ರದತ್ತವಾದ ಅಧಿಕಾರದನ್ವಯ ಬೆಂಗಳೂರು ವಿಶ್ವವಿದ್ಯಾಲಯವು, **2022-23**ನೇ ಸಾಲಿಗೆ ಬೆಂಗಳೂರಿನ **ಆಕ್ಸ್‌ಬ್ರಿಡ್ಜ್ ಬಿಸಿನೆಸ್ ಸ್ಕೂಲ್,** ನಡೆಸುತ್ತಿರುವ ಕೆಳಕಂಡ ಕೋರ್ಸಿಗೆ/ಕೋರ್ಸುಗಳಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಸಂಯೋಜನೆಯನ್ನು ನವೀಕರಿಸಿ ಮುಂದುವರಿಸಿದೆ.

| ಕೋರ್ಸು | ವಿಷಯ | ವಿದ್ಯಾರ್ಥಿ ಪ್ರಮಾಣ |
|---|---|---|
| ಬಿ.ಬಿ.ಎ. | ವಿಶ್ವವಿದ್ಯಾಲಯದ ಪರಿನಿಯಮಾವಳಿಯಂತೆ | 30 (ಮೂವತ್ತು) |

***ವಿ.ಸೂ:*** ***2022-23ನೇ ಸಾಲಿನ ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಲಗತ್ತಿಸಿದೆ. ಕಾಲೇಜುಗಳಿಗೆ ಸಿಂಡಿಕೇಟು ನಿಗಧಿಪಡಿಸಿದ ವಿದ್ಯಾರ್ಥಿ ಪ್ರಮಾಣದೊಂದಿಗೆ ಮಾತ್ರ ಸಂಯೋಜನೆಯನ್ನು ನವೀಕರಿಸಲಾಗಿದೆ. ಕಾಲೇಜು 15 ದಿನಗಳ ಒಳಗಾಗಿ ಸ್ಥಳೀಯ ವಿಚಾರಣಾ ಸಮಿತಿಯ ವರದಿಯಲ್ಲಿ ನಮೂದಿಸಿರುವ ಕೊರತೆಗಳನ್ನು ಸರಿದೂಗಿಸಿಕೊಂಡು ಉತ್ತಮ ಪಡಿಸಿಕೊಂಡಿರುವ ಬಗ್ಗೆ ಹಾಗೂ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡಿರುವ ಕುರಿತು ಅನುಸರಣಾ ವರದಿಯನ್ನು ನೀಡತಕ್ಕದ್ದು. ಇಲ್ಲವಾದಲ್ಲಿ ಮುಂದಿನ ಶೈಕ್ಷಣಿಕ ವರ್ಷದ ಸಂಯೋಜನಾ ನವೀಕರಣದ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ.***

**ಷರತ್ತುಗಳು:**

1. ಸ್ಥಳೀಯ ವಿಚಾರಣಾ ಸಮಿತಿಯು ನಮೂದಿಸಿರುವ ಷರತ್ತುಗಳನ್ನು ಪಾಲಿಸತಕ್ಕದ್ದು.
2. ***ಸರ್ಕಾರದ ಆದೇಶ ಸಂಖ್ಯೆ: ಇಡಿ 29 ಯುಎನ್‌ಇ 2021 ದಿನಾಂಕ: 12-02-2021ರಲ್ಲಿ ಸೂಚಿಸಿರುವಂತೆ ಕಾಲೇಜುಗಳು ಮುಂದಿನ ಎರಡು ವರ್ಷಗಳ ಒಳಗಾಗಿ ಸ್ಥಳೀಯ ವಿಚಾರಣ ಸಮಿತಿಯ ವರದಿಯಲ್ಲಿ ನಮೂದಿಸಲಾಗಿರುವ ಎಲ್ಲಾ ಎಂಟು Defined Parameters ಗಳನ್ನು ಪೂರೈಸಲು ಕ್ರಮವಹಿಸತಕ್ಕದ್ದು.***
3. **ಸರ್ಕಾರವು ನಿರ್ದೇಶಿಸಿರುವಂತೆ ಸಂಯೋಜಿತ ಕೋರ್ಸುಗಳಿಗೆ ಕಡ್ಡಾಯವಾಗಿ ಸರ್ಕಾರದ UUCMS ಪೋರ್ಟಲ್ ಮೂಲಕವೇ ಪ್ರವೇಶಾತಿಯನ್ನು ಮಾಡತಕ್ಕದ್ದು.**
4. ನಿಗಧಿತ ವಿದ್ಯಾರ್ಥಿ ಪ್ರವೇಶ ಪ್ರಮಾಣವನ್ನು ಮೀರಿದ್ದಲ್ಲಿ ಹೆಚ್ಚುವರಿ ಪ್ರವೇಶ ಪ್ರಮಾಣಕ್ಕೆ ವಿಶ್ವವಿದ್ಯಾಲಯ ಅಂಗೀಕಾರ ನೀಡುವುದಿಲ್ಲ.
5. ಯಾವುದೇ ಕೋರ್ಸಿಗೆ/ಕೋರ್ಸುಗಳಿಗೆ ವಿಶ್ವವಿದ್ಯಾಲಯದ ಪೂರ್ವಾನುಮತಿಯಿಲ್ಲದೆ ಶಾಖೆಗಳನ್ನು ಹೆಚ್ಚಿಸಬಾರದು.
6. ಸದರಿ ಪದವಿ ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶ ಕಲ್ಪಿಸುವಾಗ ಸರ್ಕಾರದಿಂದ ಆಗಿಂದಾಗ್ಗೆ ಹೊರಡಿಸುವ ಮೀಸಲಾತಿ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
7. Open electiveಗೆ ಸಂಬಂಧಪಟ್ಟ ಹಾಗೆ, ಪ್ರತಿ ಸಂಯೋಜಿತ ಕಾಲೇಜಿನ, ಒಟ್ಟು ಅನುಮೋದಿತ ಕೋರ್ಸ್-ಕಾಂಬಿನೇಷನ್‌ಗಳಲ್ಲಿನ ಪ್ರತಿ ವಿಷಯದ ವಿದ್ಯಾರ್ಥಿ ಪ್ರಮಾಣ (Intake) ಪ್ರಸ್ತುತ ಅನುಮೋದಿತ ವಿದ್ಯಾರ್ಥಿ ಪ್ರಮಾಣದ 50% ಮೀರದಂತೆ ಕ್ರಮ ವಹಿಸುವುದು.
8. ವಿಶ್ವವಿದ್ಯಾಲಯವು, ಕಾಲೇಜಿನ ವಿದ್ಯಾರ್ಥಿಗಳು, ಬೋಧಕರು ಹಾಗೂ ಬೋಧಕೇತರ ನೌಕರರ ಬಗ್ಗೆ ಕಾಲಕಾಲಕ್ಕೆ ಹೊರಡಿಸುವ ನಿಯಮಾವಳಿ/ಪರಿನಿಯಮಾವಳಿ ಮತ್ತು ಆದೇಶಗಳನ್ನು ಕಾಲೇಜು ಪಾಲಿಸತಕ್ಕದ್ದು. ಕಾಲೇಜು, ವಿಶ್ವವಿದ್ಯಾಲಯದ ಸಂಯೋಜನಾ ಅಧಿಸೂಚನೆಗನುಗುಣವಾಗಿ ಕೋರ್ಸುಗಳಿಗೆ ನಿಗಧಿಪಡಿಸಿರುವ ವಿದ್ಯಾರ್ಥಿ ಪ್ರಮಾಣವನ್ನು ಮೀರದಂತೆ ಹಾಗೂ ವಿಶ್ವವಿದ್ಯಾಲಯವು ಕೋರ್ಸುಗಳಿಗೆ ನಿಗಧಿಪಡಿಸಿರುವ ಅರ್ಹತಾ ನಿಯಮಾವಳಿಗಳನ್ನು ಉಲ್ಲಂಘಿಸದಂತೆ ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶವನ್ನು ಮಾಡಿಸಿಕೊಳ್ಳತಕ್ಕದ್ದು.
9. ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ವಿಶ್ವವಿದ್ಯಾಲಯ ಕಾಲಕಾಲಕ್ಕೆ ನಿಗಧಿಪಡಿಸುವ ಪ್ರವೇಶ ಮತ್ತು ಇತರೇ ಶುಲ್ಕಗಳನ್ನು ಮೀರದಂತೆ, ನಿಗಧಿಪಡಿಸಿದ ವಿದ್ಯಾರ್ಥಿ ಪ್ರಮಾಣದ ಶೇಕಡಾ 50ರಂತೆ (ಸರ್ಕಾರಿ ಕಾಲೇಜುಗಳಿಗೆ ಶೇಕಡಾ 100ರಂತೆ) ವಿಶ್ವವಿದ್ಯಾಲಯವು ಪ್ರಾಯೋಜಿಸುವ ವಿದ್ಯಾರ್ಥಿಗಳಿಂದ ಪ್ರವೇಶವನ್ನು ಮಾಡಿಸಿಕೊಳ್ಳತಕ್ಕದ್ದು.

## ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸಿಎ-3/ಎ3/OBSC/ಹೊ.ಕೋ.ಸಂ/2022-2023

ಜ್ಞಾನಭಾರತಿ
ಬೆಂಗಳೂರು-56
**ದಿನಾಂಕ: 06-10-2022**

### <u>ಅಧಿಸೂಚನೆ</u>

**ವಿಷಯ : 2022-2023**ನೇ ಸಾಲಿಗೆ ಬೆಂಗಳೂರಿನ **ಆಕ್ಸ್‌ಬ್ರಿಡ್ಜ್ ಬಿಸಿನೆಸ್ ಸ್ಕೂಲ್‌ಗೆ** ಹೊಸ ಕೋರ್ಸಿನ ಸಂಯೋಜನೆ ನೀಡುವ ಬಗ್ಗೆ.

**ಉಲ್ಲೇಖ:** 1. ಸರ್ಕಾರದ ಪತ್ರದ ಸಂಖ್ಯೆ ಇಡಿ:389:ಯುಬಿವಿ.:2022 ದಿನಾಂಕ:07-09-2022 (ದಿನಾಂಕ:23-09-2022ರಂದು ಸ್ವೀಕೃತಗೊಂಡಿರುತ್ತದೆ)
2. ಕುಲಪತಿಯವರ ಅನುಮೋದನೆ ದಿನಾಂಕ: 01-10-2022

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ **2000**ದ **59**ನೇ ಪ್ರಕರಣದ **11**ನೇ ಉಪಬಂಧದಲ್ಲಿ ಪ್ರದತ್ತವಾದ ಅಧಿಕಾರದನ್ವಯ ಬೆಂಗಳೂರು ವಿಶ್ವವಿದ್ಯಾಲಯವು **2022-2023**ನೇ ಸಾಲಿನಿಂದ **ಆಕ್ಸ್‌ಬ್ರಿಡ್ಜ್ ಬಿಸಿನೆಸ್ ಸ್ಕೂಲ್‌ಗೆ** ಕೆಳಗೆ ನಮೂದಿಸಿರುವ ಕೋರ್ಸನ್ನು ಹೊಸದಾಗಿ ಪ್ರಾರಂಭಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸಂಯೋಜನೆಯನ್ನು ಮಂಜೂರು ಮಾಡಿದೆ.

| ಕೋರ್ಸು | ವಿಷಯ | ವಿದ್ಯಾರ್ಥಿ ಪ್ರಮಾಣ |
|---|---|---|
| ಬಿ.ಕಾಂ. | ವಿಶ್ವವಿದ್ಯಾಲಯದ ಪರಿನಿಯಮಾವಳಿಯಂತೆ | 60 (ಅರವತ್ತು) |

6 ತಿಂಗಳುಗಳ ಒಳಗಾಗಿ ಕಟ್ಟಡ ಸುರಕ್ಷತೆ/ಸಂರಚನೆ ಸ್ಥಿರತೆ ಪ್ರಮಾಣಪತ್ರವನ್ನು ಲೋಕೋಪಯೋಗಿ ಇಲಾಖೆಯಿಂದ ಪಡೆದು ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು. 3 ತಿಂಗಳುಗಳ ಒಳಗಾಗಿ ಯುಜಿಸಿ ವಿನಿಯಮಗಳನ್ವಯ ಅಗತ್ಯವಾಗುವ ಮೂಲ ಧನ ನಿರ್ವಹಣೆ ಮಾಡತಕ್ಕದ್ದು ಹಾಗೂ ಮುಚ್ಚಳಿಕೆಯನ್ನು ಕಾರ್ಗತಗೊಳಿಸತಕ್ಕದ್ದು., ನ್ಯಾಕ್ ಮಾನ್ಯತೆಯನ್ನು ಒಂದು ವರ್ಷದೊಳಗಾಗಿ ಪಡೆಯತಕ್ಕದ್ದು, ತಪ್ಪಿದಲ್ಲಿ, ಹೊಸ ಕೋರ್ಸು ಸಂಯೋಜನೆಗೆ ಸರ್ಕಾರವು ಮಾಡಿರುವ ಶಿಫಾರಸ್ಸು ಸ್ವಯಂಚಾಲಿತವಾಗಿ ರದ್ದುಗೊಳ್ಳುತ್ತದೆ.

2 ತಿಂಗಳುಗಳ ಒಳಗಾಗಿ NET/SLET, Ph.D ಅರ್ಹತೆಯುಳ್ಳ ಬೋಧಕರನ್ನು ನೇಮಿಸಿಕೊಂಡು, ಯುಜಿಸಿ /ರಾಜ್ಯ ವೇತನ ಶ್ರೇಣಿಯಲ್ಲಿ ವೇತನ ಪಾವತಿಸತಕ್ಕದ್ದು ಮತ್ತು ಅರ್ಹ ದೈಹಿಕ ಶಿಕ್ಷಣ ನಿರ್ದೇಶಕರನ್ನು ಕೂಡಲೇ ನೇಮಿಸಿಕೊಳ್ಳತಕ್ಕದ್ದು, ರೋಷ್ಟರ್ ವ್ಯವಸ್ಥೆಯನ್ನು ಪಾಲಿಸುವುದು ಹಾಗೂ ಗ್ರಂಥಾಲಯವನ್ನು ಉನ್ನತೀಕರಿಸುವುದು ಸೇರಿದಂತೆ ಸಮಿತಿಯು ಸ್ಥಳೀಯ ವಿಚಾರಣೆ ಸಮಿತಿಯ ಎಲ್ಲಾ ಷರತ್ತುಗಳನ್ನು ಹಾಗೂ ಸರ್ಕಾರದ ಪತ್ರದಲ್ಲಿನ ಷರತ್ತುಗಳನ್ನು ಪಾಲಿಸತಕ್ಕದ್ದು, ತಪ್ಪಿದಲ್ಲಿ, 2023-24ನೇ ಸಾಲಿನಿಂದ ಕಾಲೇಜಿನ ಸಂಯೋಜನೆಯನ್ನು ರದ್ದುಪಡಿಸಲು ಕ್ರಮಕೈಗೊಳ್ಳಲಾಗುವುದು.